ದಾವಣಗೆರೆ ವಿಶ್ವವಿದ್ಯಾನಿಲಯ
DAVANGERE UNIVERSITY

ಕುಲಸಚಿವರ ಕಛೇರಿ (ಪರೀಕ್ಷಾಂಗ),
ದಾವಣಗೆರೆ ವಿಶ್ವವಿದ್ಯಾನಿಲಯ,
ಶಿವಗಂಗೋತ್ರಿ, ದಾವಣಗೆರೆ-577007.
ದೂರವಾಣಿ ಸಂಖ್ಯೆ: 08192-208420/208104.

Office of the Registrar (Evaluation)
Davangere University,
Shivagangothri, Davangere -577007.
Phone No. 08192-208420/208104.

Email ID: examination@davangereuniversity.ac.in & registrarevaluationdvg@gmail.com

ಸಂಖ್ಯೆ:ದಾವಿವಿ:ಪವಿ:ಘಟಿ:-10:2023-24/3800 ದಿನಾಂಕ:07-11-2023.

-:: ಪ್ರಕಟಣೆ ::-

ವಿಷಯ: **11ನೇ ಘಟಿಕೋತ್ಸವದಲ್ಲಿ ಪದವಿ ಪಡೆಯಲು ಅರ್ಹ ಅಭ್ಯರ್ಥಿಗಳಿಂದ ಪ್ರಮಾಣ ಪತ್ರಕ್ಕಾಗಿ ಅರ್ಜಿಗಳನ್ನು ಆಹ್ವಾನಿಸುತ್ತಿರುವ ಬಗ್ಗೆ.**

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ **ದಿನಾಂಕ: 07-11-2023.**

*****

ದಾವಣಗೆರೆ ವಿಶ್ವವಿದ್ಯಾನಿಲಯದ **11ನೇ ವಾರ್ಷಿಕ ಘಟಿಕೋತ್ಸವದಲ್ಲಿ** ಪದವಿ ಪಡೆಯಲು **ಫೆಬ್ರವರಿ/ಮಾರ್ಚ್-2023, ಜುಲೈ/ಆಗಸ್ಟ್-2023, ಮತ್ತು ಸೆಪ್ಟೆಂಬರ್/ಅಕ್ಟೋಬರ್-2023ರಲ್ಲಿ** ನಡೆದ ವಿವಿಧ ಸ್ನಾತಕ/ಬಿ.ವಿ.ಎ/ಬಿ.ಇಡಿ/ಬಿ.ಪಿ.ಇಡಿ/ಸ್ನಾತಕೋತ್ತರ/ಪಿಹೆಚ್.ಡಿ/ಎಂ.ಫಿಲ್., ಪದವಿಗಳ ಅಂತಿಮ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ **"ಪದವಿ/ರ್ಯಾಂಕ್/ಚಿನ್ನದ ಪದಕ/ಪ್ರಮಾಣ ಪತ್ರಗಳನ್ನು"** ಈ ಘಟಿಕೋತ್ಸವದಲ್ಲಿ ಪ್ರದಾನ ಮಾಡಲಾಗುವುದು. ಈ ಹಿನ್ನೆಲೆಯಲ್ಲಿ ಮೇಲೆ ಸೂಚಿಸಿದ ವರ್ಷದಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ಶುಲ್ಕ ಪಾವತಿಸಿ ಅರ್ಜಿ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ ಹಾಗೆಯೇ ಈಗಾಗಲೇ ಶುಲ್ಕ ಪಾವತಿಸಿರುವ ವಿದ್ಯಾರ್ಥಿಗಳು ಅರ್ಜಿಯನ್ನು ಮಾತ್ರ ಭರ್ತಿ ಮಾಡತಕ್ಕದ್ದು.

ಅಭ್ಯರ್ಥಿಗಳು ಪದವಿ ಪ್ರಮಾಣ ಪತ್ರದ ಅರ್ಜಿಗಳನ್ನು ಅನ್‌ಲೈನ್ ತಂತ್ರಜ್ಞಾನ ಮೂಲಕವೇ **ದಿನಾಂಕ:30-11-2023** ರೊಳಗೆ ಸಲ್ಲಿಸತಕ್ಕದ್ದು. ಇದಕ್ಕಾಗಿ ವಿಶ್ವವಿದ್ಯಾನಿಲಯದ ವೆಬ್‌ಸೈಟ್ ವಿಳಾಸ www.davangereuniversity.ac.in ವಿದ್ಯಾರ್ಥಿಗಳು Examination ಮೆನುವಿಗೆ ಹೋಗಿ DU Portal ನಲ್ಲಿ Convocation Portal ನ ಮೂಲಕ ಅರ್ಜಿಯನ್ನು ಭರ್ತಿ ಮಾಡುವುದು. ಈ ಅರ್ಜಿಯನ್ನು Upload ಮಾಡುವ ಬಗ್ಗೆ ಸೂಚನಾ ವಿವರಗಳನ್ನು ಸದರಿ ವೆಬ್‌ಸೈಟ್‌ನ ಲಿಂಕ್‌ನಲ್ಲಿಯೇ ನೀಡಲಾಗಿದೆ.

ಪಿಹೆಚ್.ಡಿ/ಎಂ.ಫಿಲ್ ಅರ್ಹ ಅಭ್ಯರ್ಥಿಗಳು ಅರ್ಜಿಯನ್ನು ನೇರವಾಗಿ Online ನಲ್ಲಿ ವಿಶ್ವವಿದ್ಯಾನಿಲಯದ ವೆಬ್ ಸೈಟ್ www.davangereuniversity.ac.inನಲ್ಲಿ ನೀಡಲಾಗಿರುವ ನೋಂದಣಿ ಸಂಖ್ಯೆಗಳನ್ನು ಬಳಸಿ ಅರ್ಜಿ ಸಲ್ಲಿಸಬಹುದಾಗಿದೆ.

ಶುಲ್ಕದ ವಿವರಗಳು ಈ ಕೆಳಗಿನಂತಿದೆ:

ಕ್ರ. ಸಂ.	ಪದವಿ	ಪೂರ್ಣಗೊಂಡ ವರ್ಷ	ಸಾಮಾನ್ಯ ವರ್ಗದ ಅಭ್ಯರ್ಥಿಗಳು (ರೂ.)	ಪ.ಜಾತಿ/ಪ.ಪಂಗಡ/ ಪ್ರವರ್ಗ-1 ಅಭ್ಯರ್ಥಿಗಳು (ರೂ.)	ಎನ್.ಆರ್.ಐ ಅಭ್ಯರ್ಥಿಗಳು (ರೂ.)
1.	ಸ್ನಾತಕ ಪದವಿ	ಫೆಬ್ರವರಿ/ಮಾರ್ಚ್-2023	880-00	715-00	880-00
		ಜುಲೈ/ಆಗಸ್ಟ್-2023			
2.	ಸ್ನಾತಕೋತ್ತರ ಪದವಿ	ಸೆಪ್ಟೆಂಬರ್/ಅಕ್ಟೋಬರ್-2022	1,355-00	850-00	1,355-00
3.	ಪಿಹೆಚ್.ಡಿ/ಎಂ.ಫಿಲ್	2023-24	2,555-00	2,240-00	2,555-00

ಕ್ರ.ಸಂ.	ಪದವಿ	ಪೂರ್ಣಗೊಂಡ ವರ್ಷ	ಸಾಮಾನ್ಯ ವರ್ಗದ ಅಭ್ಯರ್ಥಿಗಳು (ರೂ.)	ಪ.ಜಾತಿ/ಪ.ಪಂಗಡ/ ಪ್ರವರ್ಗ-1 ಅಭ್ಯರ್ಥಿಗಳು (ರೂ.)	ಎನ್.ಆರ್.ಐ ಅಭ್ಯರ್ಥಿಗಳು (ರೂ.)
4.	ಬಿ.ಇಡಿ. ಪದವಿ	ಫೆಬ್ರವರಿ/ಮಾರ್ಚ್-2023	880-00	715-00	880-00
5.	ಬಿಪಿ.ಇಡಿ ಪದವಿ	ಅಕ್ಟೋಬರ್-2023	880-00	715-00	880-00

ಅಭ್ಯರ್ಥಿಗಳಿಗೆ ಸೂಚನೆಗಳು:

1. 11ನೇ ಘಟಿಕೋತ್ಸವ ಸಮಾರಂಭ ನಡೆಯುವ ನಿಗದಿತ ದಿನ, ಸಮಯ & ಸ್ಥಳವನ್ನು ವಿಶ್ವವಿದ್ಯಾನಿಲಯದ ಅಂತರ್ಜಾಲ ತಾಣ/ಪತ್ರಿಕೆ/ಮಾದ್ಯಮಗಳಲ್ಲಿ/ಎಲ್ಲಾ ಕಾಲೇಜು/ಸ್ನಾತಕೋತ್ತರ ಕೇಂದ್ರ/ಘಟಕ ಕಾಲೇಜುಗಳಲ್ಲಿ ಪ್ರಕಟಿಸಲಾಗುವುದು.
2. ಆಯಾ ಪದವಿಗಳಲ್ಲಿ ಪ್ರಥಮ ರ್ಯಾಂಕ್ ಪಡೆದವರಿಗೆ ಮಾತ್ರ ಚಿನ್ನದ ಪದಕ/ಪದವಿ ಪ್ರಮಾಣ ಪತ್ರಗಳನ್ನು/ ಪಿ.ಹೆಚ್.ಡಿ/ಎಂ.ಫಿಲ್ ಅಭ್ಯರ್ಥಿಗಳಿಗೂ ಘಟಿಕೋತ್ಸವ ವೇದಿಕೆಯ ಮೇಲೆ ಪ್ರದಾನ ಮಾಡಲಾಗುವುದು.
3. 02 ರಿಂದ 10 ನೇ ರ್ಯಾಂಕ್ ಪಡೆದ ಅಭ್ಯರ್ಥಿಗಳಿಗೆ ರ್ಯಾಂಕ್ ಪ್ರಮಾಣ ಪತ್ರ ಮತ್ತು ಪದವಿ ಪ್ರಮಾಣ ಪತ್ರಗಳನ್ನು ಹಾಗೂ ಇತರೆ ಎಲ್ಲಾ ಪದವಿಗಳ ಪದವೀಧರ ಪದವಿ ಪ್ರಮಾಣ ಪತ್ರಗಳನ್ನು ಘಟಿಕೋತ್ಸವದ ನಂತರ ಸಂಬಂಧಿಸಿದ ಕಾಲೇಜುಗಳಿಗೆ ಕಳುಹಿಸಲಾಗುವುದು.
4. ಅಭ್ಯರ್ಥಿಗಳು ಶುಲ್ಕವನ್ನು ATM Debit Card/Credit Card/Internet Banking ನಲ್ಲಿ ನೇರವಾಗಿ ಪಾವತಿಸಬಹುದಾಗಿದೆ.
5. ಪ.ಜಾತಿ/ಪ.ಪಂಗಡ/ಪ್ರವರ್ಗ-1 ಅಭ್ಯರ್ಥಿಗಳ ಆದಾಯ ಪ್ರಮಾಣ ಪತ್ರ ಮತ್ತು ಜಾತಿ ಪ್ರಮಾಣ ಪತ್ರಗಳನ್ನು ಪರಿಶೀಲಿಸುವ ಹೊಣೆಯು ಆಯಾ ಕಾಲೇಜಿನ ಪ್ರಾಂಶುಪಾಲರ ಜವಾಬ್ದಾರಿಯಾಗಿರುತ್ತದೆ.
6. **ಈ ಹಿಂದಿನ ವರ್ಷಗಳಲ್ಲಿ ತೇರ್ಗಡೆಯಾಗಿ ಪದವಿ ಪ್ರಮಾಣ ಪತ್ರವನ್ನು ಪಡೆಯದವರು ಪ್ರಸ್ತುತ ಸಾಲಿನಲ್ಲಿ ನಿಗದಿಪಡಿಸಿದ ಶುಲ್ಕದೊಂದಿಗೆ ದಂಡ ಶುಲ್ಕ ರೂ.1200/- ಪಾವತಿಸಬೇಕು ಹಾಗೂ ಪ್ರತಿ ವರ್ಷಕ್ಕೆ ರೂ.120/- ರಂತೆ ಶೋಧನಾ ಶುಲ್ಕ ಪಾವತಿಸಬೇಕಾಗುತ್ತದೆ.**
7. ಅಪೂರ್ಣವಾದ, ತಪ್ಪುಗಳಿಂದ ಕೂಡಿದ, ಕೊನೆಯ ದಿನಾಂಕದ ನಂತರ ಸ್ವೀಕೃತವಾದ, ಸಂಬಂಧಿಸಿದ ಪ್ರಾಂಶುಪಾಲರ ಮುಖಾಂತರ ಮತ್ತು ನಿಗದಿತ ಅಡಕಗಳನ್ನೊಳಗೊಂಡಿರದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
8. ಒಮ್ಮೆ ಪಾವತಿಸಿದ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ ಮತ್ತು ಮುಂದಿನ ಘಟಿಕೋತ್ಸವಕ್ಕೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದಿಲ್ಲ.
9. **ವಿದ್ಯಾರ್ಥಿಗಳು ಅನ್‌ಲೈನ್‌ನಲ್ಲಿ ಘಟಿಕೋತ್ಸವ ಅರ್ಜಿ ಸಲ್ಲಿಸುವಾಗ ಕನ್ನಡದಲ್ಲಿ ಹೆಸರು ಸರಿಯಾಗಿ ಪರಿಶೀಲಿಸಿ ನಮೂದಿಸಬೇಕು. ಇಲ್ಲದಿದ್ದಲ್ಲಿ ತಿದ್ದುಪಡಿಗೆ ನಿಯಾಮಾನುಸಾರ ದಂಡಶುಲ್ಕವನ್ನು ವಿಧಿಸಲಾಗುವುದು.**
10. ಪ್ರಥಮ ರ್ಯಾಂಕ್ ಪಡೆದ ವಿದ್ಯಾರ್ಥಿಗಳ ಅಂಚೆ ವಿಳಾಸ ಮೊಬೈಲ್ ನಂಬರ್ ಇತ್ಯಾದಿ ವಿವರವನ್ನು **ದಿನಾಂಕ: 28-11-2023** ರ ಒಳಗೆ ಸಂಬಂಧಪಟ್ಟ ಕಾಲೇಜಿನವರು ತುರ್ತಾಗಿ ವಿಶ್ವವಿದ್ಯಾನಿಲಯದ ಪರೀಕ್ಷಾಂಗ ವಿಭಾಗಕ್ಕೆ ಸಲ್ಲಿಸಬೇಕು.
11. **ವಿದ್ಯಾರ್ಥಿಗಳು ತಮ್ಮ ಅಂಕಪಟ್ಟಿಯಲ್ಲಿ NCL ಎಂದು ನಮೂದಾಗಿದ್ದಲ್ಲಿ ಅಂತಹ ವಿದ್ಯಾರ್ಥಿಗಳು NCL ರದ್ದುಪಡಿಸಿಕೊಂಡ ನಂತರ ದಿನಾಂಕ:31-11-2023 ರೊಳಗೆ ಘಟಿಕೋತ್ಸವ ಪ್ರಮಾಣ ಪತ್ರಕ್ಕೆ ಅರ್ಜಿಸಲ್ಲಿಸುವುದು. ಕೊನೆ ದಿನಾಂಕದ ನಂತರ ಬಂದ ನಂತರ ಅರ್ಜಿ ಸ್ವೀಕರಿಸುವುದಿಲ್ಲ.**

ಸೂಚನೆ: ಅಂತಿಮ ಸೆಮಿಸ್ಟರ್ ಅಂಕಪಟ್ಟಿಯಲ್ಲಿ ವಿದ್ಯಾರ್ಥಿ ಹೆಸರುಗಳಲ್ಲಿ ಏನಾದರೂ ತಿದ್ದುಪಡಿ ಮಾಡುವುದಿದ್ದರೆ ಘಟಿಕೋತ್ಸವದ ಅರ್ಜಿ ಸಲ್ಲಿಸುವುದಕ್ಕಿಂತ ಪೂರ್ವದಲ್ಲಿ ಸರಿ ಮಾಡಿಕೊಳ್ಳಬೇಕು.

ಸಂಪರ್ಕಿಸಬೇಕಾದ ವಿಳಾಸ	ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ
ಕುಲಸಚಿವರು(ಪರೀಕ್ಷಾಂಗ) ಕಾರ್ಯಾಲಯ ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ – 577 007. ದಾವಣಗೆರೆ ಜಿಲ್ಲೆ, ಕರ್ನಾಟಕ ರಾಜ್ಯ.	E-mail ID: dud.uniclare@gmail.com convocation@davangereuniversity.ac.in ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ: 6363341215, 6363337901 ಹಾಗೂ 6363351762 ಸಂಪರ್ಕಿಸಬಹುದು.

ಆದೇಶದ ಮೇರೆಗೆ

ಕುಲಸಚಿವರು (ಪರೀಕ್ಷಾಂಗ)
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ - 577 007.

ಗೆ,

ಪ್ರಕಟಣಾ ಫಲಕದಲ್ಲಿ ಪ್ರಕಟಿಸಲು ಕೋರಿದೆ.

1. ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಸ್ನಾತಕ/ಸ್ನಾತಕೋತ್ತರ ವಿಭಾಗಗಳ ಅಧ್ಯಕ್ಷರು/ಸಂಯೋಜನಾಧಿಕಾರಿಗಳು/ಪ್ರಾಂಶುಪಾಲರುಗಳಿಗೆ,.

ಪ್ರತಿಗಳು:

1. ಸಹಾಯಕ ನಿರ್ದೇಶಕರು, ಮಾರ್ಕೆಟಿಂಗ್ ಸಂವಹನ ಮತ್ತು ಜಾಹೀರಾತು ಸೀಮಿತ (ಎಂ.ಸಿ.ಎ) (ಕರ್ನಾಟಕ ಸರ್ಕಾರದ ಒಂದು ಉದ್ಯಮ), # 38 ಎ, 2ನೇ ಮಹಡಿ, ಜಿಲ್ಲಾ ಆಡಳಿತ ಭವನ, ಕರೂರು ರಸ್ತೆ, ದಾವಣಗೆರೆ –577 002. ಕರ್ನಾಟಕ ರಾಜ್ಯ ಪತ್ರದ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವ ಸಲುವಾಗಿ ಕಳುಹಿಸಿದೆ.
2. ನಿರ್ದೇಶಕರು, ದೂರದರ್ಶನ ಕೇಂದ್ರ, ಜೆ.ಸಿ. ನಗರ ಬೆಂಗಳೂರು–560006. ಸುದ್ದಿ ರೂಪದಲ್ಲಿ ಭಿತ್ತರಿಸುವಂತೆ ಕೋರಿದೆ.
3. ಉಪನಿರ್ದೇಶಕರು ವಾರ್ತಾ ಮತ್ತು ಪ್ರಚಾರ ಇಲಾಖೆ, ವಾರ್ತಾಭವನ, ದೇವರಾಜ ಅರಸು ಲೇಔಟ್ , ದಾವಣಗೆರೆ–577 001. ಎಲ್ಲಾ ದಿನ ಪತ್ರಿಕೆಗಳಲ್ಲಿ – ಸುದ್ದಿ ರೂಪದಲ್ಲಿ ಪ್ರಕಟಿಸುವಂತೆ ಕೋರಿದೆ.
4. ನಿರ್ದೇಶಕರು, ಆಕಾಶವಾಣಿ, ಪೇಪರ್ ಟೌನ್ ಭದ್ರಾವತಿ–ಸುದ್ದಿ ರೂಪದಲ್ಲಿ ಭಿತ್ತರಿಸುವಂತೆ ಕೋರಿದೆ.
5. ವಿಶ್ವವಿದ್ಯಾನಿಲಯದ ಜಾಲತಾಣದ ಮುಖ್ಯಸ್ಥರು– ದಾವಣಗೆರೆ ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ವಿದ್ಯಾರ್ಥಿಗಳ ಹಾಗೂ ಸಾರ್ವಜನಿಕರ ಮಾಹಿತಿಗಾಗಿ ಈ ಅಧಿಸೂಚನೆಯನ್ನು ಭಿತ್ತರಿಸಲು ಕೋರಿದೆ.
6. ದಾವಣಗೆರೆ ವಿಶ್ವವಿದ್ಯಾನಿಲಯದ ಸಿಂಡಿಕೇಟ್, ವಿದ್ಯಾವಿಷಯಕ ಪರಿಷತ್, ಹಣಕಾಸು ಸಮಿತಿ ಸದಸ್ಯರುಗಳು ಮತ್ತು ವಿವಿಧ ನಿಕಾಯಗಳ ಡೀನರುಗಳು.
7. ಆಪ್ತ ಸಹಾಯಕರು–ಕುಲಪತಿಗಳು/ಕುಲಸಚಿವರು/ಕುಲಸಚಿವ (ಮೌಲ್ಯಮಾಪನ) ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ, ದಾವಣಗೆರೆ.
8. ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ, ದಾವಣಗೆರೆ.
9. ಕುಲಸಚಿವರ (ಮೌಲ್ಯಮಾಪನ) ಮೈಸೂರು ವಿ.ವಿ./ಬೆಂಗಳೂರು ವಿ.ವಿ/ಮಂಗಳೂರು ವಿ.ವಿ/ಕರ್ನಾಟಕ ವಿ.ವಿ/ ಗುಲ್ಬರ್ಗಾ ವಿ.ವಿ./ಕುವೆಂಪು ವಿ.ವಿ/ ರಾಣಿ ಚೆನ್ನಮ್ಮ ವಿ.ವಿ./ಬೆಳಗಾಂ ವಿ.ವಿ./ ತುಮಕೂರು ವಿ.ವಿ./ ಕರ್ನಾಟಕ ರಾಜ್ಯ ಮಹಿಳಾ ವಿ.ವಿ./ ವಿಜಯಪುರ ವಿ.ವಿ./ವಿಜಯನಗರ ಶ್ರೀಕೃಷ್ಣ ದೇವರಾಯ ವಿ.ವಿ. ಬಳ್ಳಾರಿ.
10. ಗ್ರಂಥಪಾಲಕರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
11. ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಗುಡ್ಡದ ರಂಗವ್ವನಹಳ್ಳಿ, ಚಿತ್ರದುರ್ಗ.
12. ಪ್ರಾಚಾರ್ಯರು, ವಿಶ್ವವಿದ್ಯಾನಿಲಯ ದೃಶ್ಯಕಲಾ ಕಾಲೇಜು, ದಾವಣಗೆರೆ.
13. ನಿರ್ದೇಶಕರು, ಯೋಜನೆ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ, ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ, ದಾವಣಗೆರೆ.
14. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್, ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ, ದಾವಣಗೆರೆ.
15. ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ, ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ, ದಾವಣಗೆರೆ.
16. ಕಾರ್ಯಪಾಲಕ ಅಭಿಯಂತರರು, ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ, ದಾವಣಗೆರೆ.
17. ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ, ದಾವಣಗೆರೆ.
18. ಎಲ್ಲಾ ಅಧೀಕ್ಷಕರುಗಳು, ಆಡಳಿತ/ಘಟಿಕೋತ್ಸವ ಶಾಖೆ, ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ, ದಾವಣಗೆರೆ.
19. ಕಡತಕ್ಕೆ.